ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತುಮಕೂರು ಇದನ್ನು ಮೇಲ್ದರ್ಜೆಗೆ ಏರಿಸಲು ತೆಗೆದುಕೊಂಡ ಕ್ರಮದ ಬಗ್ಗೆ

ಪ್ರಶ್ನೆ. ಶ್ರೀ ಎಸ್. ಷಫಿ ಅಹ್ಮದ್, (ತುಮಕೂರು).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತುಮಕೂರು ಇದನ್ನು ಮೇಲ್ದರ್ಜೆಗೆ ಏರಿಸಲು ತೆಗೆದುಕೊಂಡ ಕ್ರಮಗಳೇನು ?

೨. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತುಮಕೂರಿನಲ್ಲಿ ಕಳೆದ ೫ ವರ್ಷಗಳಲ್ಲಿ ಸಂಗ್ರಹಿಸಿದ ಆದಾಯ ಎಷ್ಟು ?

ಶ್ರೀ ಜೆಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).—

೧. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತುಮಕೂರಿನ ಕಾರ್ಯದರ್ಶಿಯ ಹುದ್ದೆಯನ್ನು ಮೇಲ್ದರ್ಜೆಗೆ ಏರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

೨. ೧೯೮೬–೮೭ ರೂ. ೧೯,೬೮,೬೬೨-೦೦
೧೯೮೭–೮೮ ರೂ. ೩೧,೭೧,೭೯೯-೦೦
೧೯೮೮–೮೯ ರೂ. ೩೭,೫೫,೨೪೫-೦೦

ತುಮಕೂರು ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಇರುವುದರ ಬಗ್ಗೆ

ಪ್ರಶ್ನೆ. ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯಲ್ಲಿ ಪೋಲೀಸ್ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು),—

ಅ) ಹೌದು,

ಆ) ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಈ ಪ್ರಸ್ತಾವನೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ,

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೧೨ ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಮಾನ್ಯ ಉಸ್ತಾದ್ ಅವರು ಅರ್ಜಿಯನ್ನು ಸಭೆಗೆ ಒಪ್ಪಿಸುವುದು

ಅರ್ಜಿಯನ್ನೊಪ್ಪಿಸುವುದು

(ಶ್ರೀ ಎಂ. ಎಲ್, ಉಸ್ತಾದ್ ಗೈರು ಹಾಜರು)

ಶ್ರೀ ರಾಮಲಿಂಗರೆಡ್ಡಿ,—ಮಾನ್ಯ ಅಧ್ಯಕ್ಷರೆ, ನಾನು ಕೆಲವು ಪ್ರಶ್ನೆಗಳನ್ನು ಕಳಿಸಿದ್ದೆ ಅದರಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆ ಒಂದಕ್ಕೆ ಉತ್ತರಗಳನ್ನು ತಪ್ಪಾಗಿ ಕೊಟ್ಟಿದ್ದಾರೆ, ನನ್ನ ಕ್ಷೇತ್ರದಲ್ಲಿ...

ಅಧ್ಯಕ್ಷರು.—ದಯಮಾಡಿ ನಿಮ್ಮ ತಾವುಗಳು ಸಂಬಂಧಪಟ್ಟ ಸಚಿವರಿಗೆ ಆ ಬಗ್ಗೆ ಬರೆದು ಕಳುಹಿಸಿ.

ಶ್ರೀಮತಿ ಮೋಟಮ್ಮ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶಫಿ ಅಹಮದ್‌ರವರಿಗೆ ಕಳುಹಿಸಿ ಕೊಡಬೇಕಾದ ಉತ್ತರಗಳನ್ನು ನನಗೆ ಕೊಟ್ಟು ಕಳುಹಿಸಿದ್ದಾರೆ.

ಅಧ್ಯಕ್ಷರು.—ಯಾರ್ಯಾರು ಪ್ರಶ್ನೆಗಳು ಕೇಳಿರುತ್ತಾರೋ, ಅವರವರಿಗೆ ಅವರ ಉತ್ತರಗಳನ್ನು ಕಳುಹಿಸಿ ಕೊಡಬೇಕು. ಈಗ ಗವಂನ ಸೆಳೆಯುವ ಸೂಚನೆಗಳು.